**ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 327/2019**

ಫಿರ್ಯಾದುದಾರರು ಃ

ಶ್ರೀ ಮೂಗಣ್ಣಶೆಟ್ಟಿ (ಮರಣ ಹೊಂದಿರುತ್ತಾರೆ)
ಬಿನ್ ವರದಶೆಟ್ಟಿ
ಇವರ ಕಾನೂನು ಬದ್ಧ ವಾರಸುದಾರರು

1. ಗೌರಮ್ಮ ಕೋಂ ಲೇಟ್ ಮೂಗಣ್ಣಶೆಟ್ಟಿ
2. ನವೀನ ಕುಮಾರ ಟಿ.ಎಂ.
   ಬಿನ್ ಲೇಟ್ ಮೂಗಣ್ಣಶೆಟ್ಟಿ
3. ಮಮತ ಕೋಂ ನಾಗೇಶ್
   ಮೂವರ ವಾಸಃ ನಾಯಕರ ಬೀದಿ
   ಶ್ರೀ ಚಿಕ್ಕಮ್ಮ ದೇವಸ್ಥಾನದ ಹತ್ತಿರ
   ಬಿಳಿಕೆರೆ ಗ್ರಾಮ ಮತ್ತು ಹೋಬಳಿ,
   ಹುಣಸೂರು ತಾಲ್ಲೂಕು,
   ಮೈಸೂರು ಜಿಲ್ಲೆ.

4. ಲಕ್ಷ್ಮೀ ಕೋಂ ಕುಬೇರ
   ವಾಸಃ ವಾರ್ಡ ನಂ.5
   ನಾಗಮಂಗಲ ಟೌನ್
   ಮಂಡ್ಯ ಜಿಲ್ಲೆ.

**ವಿರುದ್ಧ,**

ಆರೋಪಿ/ಗಳು ಃ

ಶ್ರೀ ಆನಂದ್
ಬಿನ್ ಪುಟ್ಟಶೆಟ್ಟಿ
ವಯಸ್ಸು ಸುಮಾರು 42 ವರ್ಷಗಳು,
ವಾಸಃ ಮನೆ ನಂ.539
ರೈಲ್ವೇ ನಿಲ್ದಾಣದ ಎದುರು
ಏರ್ಟೆಲ್ ಟವರ್
ಕಡಕೋಳ, ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು 2018 ರ ಮಾರ್ಚ ಎರಡನೇ ವಾರದಲ್ಲಿ ಮೃತ ಫಿರ್ಯಾದುದಾರರಿಂದ ನಿಮ್ಮ ಕಾನೂನು ಬದ್ಧ ಅವಶ್ಯಕತೆಗಾಗಿ ರೂ.4,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು 3 ತಿಂಗಳೊಳಗಾಗಿ ಮರುಪಾವತಿಸಲು ಒಪ್ಪಿಕೊಂಡು, ಸದರಿ ಸಾಲದ ಹಣವನ್ನು ಮರುಪಾವತಿಸಲು 19-06-2018 ರ ದಿನಾಂಕ ಇರುವ ರೂ.4,00,000/- ದ ಸಿಂಡಿಕೇಟ್ ಬ್ಯಾಂಕ್, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕ್ಯಾಂಪಸ್ ಶಾಖೆ, ಮೈಸೂರು ಸಿಟಿ ಇಲ್ಲಿಗೆ ಸೇರಿದ ಚೆಕ್

ಸಂಖ್ಯೆ - 372682 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಮೃತ ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿಳಿಕೆರೆ ಶಾಖೆಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ದಿಃ 03-07-2018 ರಂದು ವಾಪಾಸಾಗಿರುತ್ತದೆ. ಆದ್ದರಿಂದ ಮೃತ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 30.07.2018 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ 31.07.2018 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಮೃತ ಫಿರ್ಯಾದುದಾರರಿಗಾಗಲಿ ಅಥವಾ ಈಗಿರುವ ಅವರ ವಾರಸುದಾರರಿಗಾಗಲೀ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ
ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **05.10.2023**

(ಪೂಜಾ ಬೆಳಕೇರಿ)
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಢಾಧಿಕಾರಿಗಳು, ಹುಣಸೂರು.